ಸ್ವತಂತ್ರ ವ್ಯಕ್ತಿತ್ವ ಬೆಳೆಯಲು ಎಂದೂ ಬಿಡಲಿಲ್ಲ ಎಂಬ ಭಾವನೆ ಹರಿಲಾಲನ ಮನಸ್ಸಿನಲ್ಲಿ ಬೇರೂರಿತ್ತು. ಇಂಥ ಪರಿಸ್ಥಿತಿಯಲ್ಲಿ ತಾನು ಬಾ ಅವರ ಹೆಸರಿಗೆ ಏನೇ ಬರೆಯುವುದೆಂದರೆ, ಬಾ ಅವರ 'ತೆರೆಮರೆಯಲ್ಲಿ' ಅವರ ಮೇಲೆ ಪ್ರಹಾರ ಮಾಡಿದಂತೆಯೇ ಎಂದು ಅವನಿಗೆ ಅನ್ನಿಸಿತು. ಆ ಮನಃಸ್ಥಿತಿಯಲ್ಲಿ ಅವನು ಬಾಪೂ ಅವರ ಪತ್ರಕ್ಕೆ ಉತ್ತರಿಸಿದ:

'ಪೂಜ್ಯ ತಂದೆಯವರಿಗೆ,

ನಿಮ್ಮ ಪತ್ರ ತಲುಪಿತು. ನನಗೆ ಬರೆಯಲು ನೀವು ಒಂದು ವಿಧಾನವನ್ನು ಮಾತ್ರ ಅನುಸರಿಸುತ್ತೀರ ಎಂದು ನನಗೆ ಅನ್ನಿಸುತ್ತದೆ. ಇದು ಮಂಗಳಕರವಾಗುವುದೆಂದು ಒಪ್ಪಲು ನಾನು ಸಿದ್ಧನಿಲ್ಲ. ಆದರೂ ನಿಮಗೆ ಸರಿಕಾಣುವ ಬಗ್ಗೆ ನಾನೇನು ಹೇಳುವುದು? ಹಿಂದಿನ ಕಾಲದಲ್ಲಿ ಯುದ್ಧದ ಸಮಯದಲ್ಲಿ ಕೋಟೆಯೊಂದರ ಹರಿತ ಮೊಳೆಗಳುಳ್ಳ ಬಾಗಿಲನ್ನು ಮುರಿಯಲು ಒಂಟೆಗಳನ್ನು ಬಾಗಿಲುಗಳಿಗೆ ಒರಗಿಸಿ ನಿಲ್ಲಿಸಲಾಗುತ್ತಿತ್ತು; ಆನೆಗಳ ರಭಸದ ಹೊಡೆತಗಳಿಂದ ಬಾಗಿಲುಗಳನ್ನು ಮುರಿಯಲಾಗುತ್ತಿತ್ತು ಎಂದು ಓದಿದ್ದೇನೆ. ಒಂಟೆಗಳ ಪ್ರಾಣವಂತೂ ಹೋಗುತ್ತಿತ್ತು, ಆದರೆ ಆನೆಗಳು ಮೊಳೆಗಳ ಆಘಾತದಿಂದ ಪಾರಾಗುತ್ತಿದ್ದವಂತೆ. ಅಂತೆಯೇ, ಬಾ ಅವರನ್ನು ನನ್ನ ತೆರೆಮರೆಯಲ್ಲಿ ಬಳಸಲಾಗುತ್ತಿದೆ ಎಂದು ನನಗೆ ಅನ್ನಿಸುತ್ತದೆ. 'ಬಾ ಅವರ ಮನವಿ' ಹೆಸರಿನಲ್ಲಿ ನೀವೇನು ಬರೆದಿರುವಿರೋ, ಅದೇ ನಿಮ್ಮ ಪತ್ರದಲ್ಲೂ ಬರೆಯಲಾಗಿದೆ.

ಬಾ ಅವರಿಗೆ ನೀವೆಲ್ಲಾ ದುಃಖವನ್ನು ಕೊಡುತ್ತೀರೋ ಅಥವಾ ನಾನು ಕೊಡುತ್ತೇನೋ ಎಂಬುದು ಪ್ರಶ್ನೆಯಾಗಿದೆ. ಬಾ ಅವರೆದುರು ಯಾವ ವಿಷಯವನ್ನು ಹೇಗೆ ಮಂಡಿಸಲಾಗುವುದೋ, ಅವರಿಗೆ ಅದು ಹಾಗೆಯೇ ಕಾಣಬರುತ್ತದೆ. ಎಂದೂ, ಯಾರೂ ಸಹ ಅವರ ಸ್ವಾತಂತ್ರ್ಯವನ್ನು ಗಮನಿಸಿಲ್ಲ. ಅವರು ಎಂದೂ ನನಗೊಂದೂ ಪತ್ರವನ್ನು ಬರೆಯಲಿಲ್ಲ. ಅವರಿಗೆ ಪತ್ರವನ್ನು ಬರೆಯುವ ಅವಕಾಶ ಮಾಡಿಕೊಟ್ಟರೆ ತಾನೇ ಅವರು ಬರೆಯುವುದು!

ಆಜ್ಞಾಕಾರಿ ಮಗ ಹರಿಲಾಲನ ಸಾಷ್ಟಾಂಗ
ನಮಸ್ಕಾರಗಳು

ತತ್ಕಾಲಕ್ಕೆ ವಿಷಯವಂತೂ ಬಗೆಹರಿಯಿತು. ಆದರೆ ಹೀರಾಲಾಲನಾಗಿದ್ದ ಹರಿಲಾಲ ಮತ್ತೊಮ್ಮೆ ಕನಸನ್ನು ನನಸು ಮಾಡಿ ಒಂಟಿ ಮತ್ತು ದಿಕ್ಕುತಪ್ಪಿದಂತಾದ. ಮಿಶನರಿಯಾಗಿ ಮರ್ಯಾದಸ್ಥ ಸ್ಥಾನ ಸಿಕ್ಕಿದ್ದನ್ನು ಹೊರತುಪಡಿಸಿ, ಹರಿಲಾಲನಿಗೆ ಬೇರಾವ ಕೆಲಸವನ್ನೂ ಕೊಡುವ ಬಗ್ಗೆ ನಿರ್ಧಾರವನ್ನು ತೆಗೆದುಕೊಳ್ಳಲಿಲ್ಲ. ಮುಸ್ಲಿಮ್ ಸಂಘಟನೆಗಳು ಹರಿಲಾಲನನ್ನು ರೇಸ್ ಕುದುರೆಯಂತೆ ಓಡಿಸಿ, ನಂತರ ಮುರಿದ ಕಾಲಿನೊಂದಿಗೆ ದೂರಕ್ಕೆ ತಳ್ಳಿತ್ತು. ಹಿಂದೂ ಸಂಘಟನೆಗಳೂ ಸಹ ಆ ಮುರಿದ ಕಾಲಿಗೆ ಪಟ್ಟಿಯನ್ನು ಸುತ್ತಿ ತನ್ನ ಇತಿಶ್ರೀಯನ್ನು ಹಾಡಿತ್ತು. ಎಲ್ಲರೂ ಅವರವರ ಕೆಲಸದಲ್ಲಿ ತೊಡಗಿದ್ದರು. ಅವರಿಗೆ ಹರಿಲಾಲ ಈಗ ಉಪಯೋಗಿಸಿದ್ದ ಒಂದು ಮೇಣದ ಬತ್ತಿಯಂತಿದ್ದ. ಮನೆಮಠ ಅಥವಾ ಉದ್ಯೋಗವಿಲ್ಲದ ಖಾಲಿ ದಿನಗಳು ಅವನೆದುರು ಬಾಯಿತೆರೆದು ನಿಂತಿದ್ದವು. ಬಳಿಯಲ್ಲಿದ್ದ ಅಲ್ಪಸ್ವಲ್ಪ ಹಣ ಸಹ ಶೀಘ್ರವಾಗಿ ಕರಗುತ್ತಿತ್ತು. ಅಷ್ಟು ವರ್ಷಗಳಿಂದ ಅಂಟಿಕೊಂಡು ಬಂದಿದ್ದ ಅಭ್ಯಾಸಗಳಿಂದ ಈಗ ಬಿಡುಗಡೆ ಹೊಂದಲು ಸಾಧ್ಯವಿರಲಿಲ್ಲ. ಅಲ್ಲದೆ ಅವನು ಅಬ್ದುಲ್ಲಾ ಗಾಂಧಿಯಾಗಿ ಕಳೆದಿದ್ದ ದಿನಗಳಲ್ಲಿ ಅವನ ಅಭ್ಯಾಸಗಳು ಮತ್ತು ಚಟಗಳು ಆಳವಾಗಿ ಬೇರೂರಿದ್ದವು.

ನಿರುದ್ದೇಶದ ಅಲೆದಾಟಗಳು, ಅಲ್ಲಲ್ಲಿ ಅರ್ಥಹೀನವಾಗಿ ಉಳಿಯುವುದು, ಮಿತಿ ಮೀರಿ ಮದ್ಯದ ಸೇವನೆ, ಹಣದ ಅತಿ ಕೊರತೆ... ಇವೆಲ್ಲದರಿಂದ ಸುತ್ತುವರೆದಿದ್ದ ಹರಿಲಾಲ ಒಮ್ಮೆ ಇಲ್ಲಿದ್ದರೆ, ಮತ್ತೊಮ್ಮೆ ಇನ್ನೆಲ್ಲೋ ಇರುತ್ತಾ ದಿನಗಳನ್ನು ಹೇಗೋ ಕಳೆಯುತ್ತಿದ್ದ.

## ಮೂವತ್ತಾರು

ದೇಶದಲ್ಲಿ ಮಾತ್ರವಲ್ಲ, ಇಡೀ ಜಗತ್ತಿನ ಶರೀರದಲ್ಲಿ ಪ್ರೇತವೊಂದು ವಾಸ ಮಾಡುತ್ತಿದೆ ಎಂಬ ಆವೇಶದಲ್ಲಿ ಎಲ್ಲವೂ ಹೊಯ್ದಾಡುತ್ತಿತ್ತು. ಸುತ್ತಮುತ್ತ ಪ್ರಚಂಡ ಕೋಲಾಹಲ ಮತ್ತು ಭಯಗ್ರಸ್ತ ರಹಸ್ಯಮಯ ವಾತಾವರಣವಿತ್ತು. ನಾಲ್ಕೂ ದಿಕ್ಕುಗಳಿಗೆ ಮಂತ್ರದ ಧಾನ್ಯಗಳನ್ನು ಚೆಲ್ಲಿ ಮಾಂತ್ರಿಕನೊಬ್ಬ ಡಿಂಡಿಮವನ್ನು ಬಾರಿಸುತ್ತಿರುವಂತೆ ತೋರುತ್ತಿತ್ತು. ಯೂರೋಪಿನ ನೆಲದಲ್ಲಿ ವಿಶ್ವ ಯುದ್ಧ ತನ್ನ ಚರಮ ಪರಾಕಾಷ್ಠೆಯನ್ನು ತಲುಪಿತ್ತು. ಜಗತ್ತಿನ ದೇಶಗಳು ಎರಡು ಪಾಳಯಗಳಲ್ಲಿ ಬದಲಾಗಿ, ಪರಸ್ಪರ ಸರ್ವನಾಶ ಮಾಡಲು ಸನ್ನದ್ಧವಾಗಿದ್ದವು. ನಿನ್ನೆಯವರೆಗೆ ಮಹಾಶಕ್ತಿಶಾಲಿ ಎಂದು ತಿಳಿಯಲಾಗಿದ್ದ ಹಾಗೂ ಅವರ ಸೋಲಿನ ಬಗ್ಗೆ ಯೋಚಿಸಲೂ ಆಗದಂಥ ಸ್ಥಿತಿಯಿತ್ತೋ, ಅಂಥ ಮಹಾಶಕ್ತಿಗಳು ತಮ್ಮ ಪ್ರಾಣದ ರಕ್ಷಣೆಗಾಗಿ ಜೀವನ್ಮರಣದ ಸಂಘರ್ಷದಲ್ಲಿ ಸಿಲುಕಿಕೊಂಡಿದ್ದವು. ದಿಲ್ಲಿಯ ಬ್ರಿಟಿಷ್ ಅಧಿಕಾರಿಗಳು, ಲಂಡನ್ನಿನ ಶಾಸಕರೆಡೆಗೆ ಕಣ್ಣುಗಳನ್ನು ನೆಟ್ಟು ಕೂತಿದ್ದರು. ಯುದ್ಧದಲ್ಲಿ ಹೋರಾಡುತ್ತಿದ್ದ ಬ್ರಿಟನ್ ಶಾಸಕರಿಗೆ ಹಿಂದೂಸ್ತಾನವು, ಅವರ ಗಂಟಲಿನಲ್ಲಿ ಸಿಕ್ಕಿಕೊಂಡ ಎಲುಬಿನಂತಾಗಿತ್ತು.

ದೇಶದೆಲ್ಲೆಡೆ ಅನಿಶ್ಚಿತತೆ, ಅವಿಶ್ವಾಸ ಮತ್ತು ಭಯದ ವಾತಾವರಣವಿತ್ತು. ಹಿಂದೂ ಮುಸ್ಲಿಮ್ ಎರಡೂ ಸಂಪ್ರದಾಯಗಳ ನಡುವೆ ಪರಸ್ಪರ ಅವಿಶ್ವಾಸ ಚರಮ ಹಂತದಲ್ಲಿತ್ತು. ಪಾಕಿಸ್ತಾನದ ಸುಂದರ ಕನಸು ಕೋಟ್ಯಂತರ ಧರ್ಮಾಂಧರೆದುರು, ಕತ್ತೆಯ ಬೆನ್ನ ಮೇಲೆ ಕೂತು ಅದರ ಬಾಯಿ ಎದುರು ಹಿಡಿದ ಮೂಲಂಗಿಯಂತೆ ತೋರುತ್ತಿತ್ತು. ಸವಾರಿ ಮಾಡಿದವನು ನಗುತ್ತಿದ್ದ. ಕತ್ತೆಯ ಬಾಯಲ್ಲಿ ಜೊಲ್ಲು ಬಂದಿತ್ತು, ಆದರೂ ಅದು ಮೂಲಂಗಿಯನ್ನು ತಿನ್ನಲು ಓಡುತ್ತಲೇ ಇತ್ತು. ಕತ್ತೆಯ ಬೆನ್ನೇರಿದ ಸವಾರ ಧರ್ಮದ ಹೆಸರಿನಲ್ಲಿ ಚಾವಟಿಯಿಂದ ಹೊಡೆಯಲು ಸದಾ ಸಿದ್ಧನಾಗಿರುತ್ತಿದ್ದ. ದಂಗೆಹೊಡೆದಾಟ, ಬೆಂಕಿ ಹಚ್ಚುವುದು, ಲೂಟಿ ಮಾಡುವುದು ಹಾಗೂ ಪರಸ್ಪರ ಹೊಡೆದಾಡಿಕೊಳ್ಳುವ ಗುಂಪು ಸುತ್ತಮುತ್ತ ವ್ಯಾಪಿಸಿತ್ತು. ಸ್ವಾತಂತ್ರ್ಯ ಎಲ್ಲೂ ಕಾಣ ಬರುತ್ತಿರಲಿಲ್ಲ. ಅಶಾಂತಿ ಮನೆ ಮನೆಯಲ್ಲೂ ವ್ಯಾಪಿಸಿತ್ತು. ಯೂರೋಪಿನ ನೆಲದಲ್ಲಿ ನಡೆಯುತ್ತಿದ್ದ ಯುದ್ಧ ಹಿಂದೂಸ್ತಾನದ ಬಾಗಿಲನ್ನು ಯಾವಾಗ ತಟ್ಟುತ್ತದೆ ಎಂಬುದು ನಿಶ್ಚಿತವಾಗಿರಲಿಲ್ಲ. ಮುಂಬೈ ಮತ್ತು ಕಲ್ಕತ್ತಾದಂಥ ನಗರಗಳೂ ಸಹ ಶೂನ್ಯವಾಗುತ್ತಿದ್ದವು. ಆಕಾಶದಿಂದ ಯಾವುದೇ ಕ್ಷಣ ಬಾಂಬುಗಳು ಬೀಳಬಹುದೆಂದ ಭಯ ಎಲ್ಲರನ್ನೂ ಕಾಡುತ್ತಿತ್ತು.

ಹಿಂದೂಸ್ತಾನದ ಜನರ ಸಹಕಾರವಿಲ್ಲದೆ ಈ ನಾಜೂಕು ಸ್ಥಿತಿ ಮತ್ತಷ್ಟು ಕಷ್ಟಕ್ಕೆ ಗುರಿಯಾಗುತ್ತದೆ, ಹೀಗಾಗಿ ಕಾಂಗ್ರೆಸ್ ಮತ್ತು ವಿಶೇಷವಾಗಿ ಬಾಪೂ ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಈ ಹೋರಾಟದಲ್ಲಿ ಹಿಂದೂಸ್ತಾನದ ಜನರ ಸಹಯೋಗ ಪಡೆಯಲು ದಿಲ್ಲಿಲಂಡನ್ನಿನ ಅಧಿಕಾರಿಗಳು ಒಂದೇ ಸಮನೆ ಪ್ರಯತ್ನಿಸುತ್ತಿದ್ದರು. ಬಾಪೂ ಅವರು ಬ್ರಿಟಿಷರಿಂದ ಈ ಮೊದಲೇ ವಂಚನೆಗೊಳಗಾಗಿದ್ದರು. ಮೊದಲ ವಿಶ್ವಯುದ್ಧದಲ್ಲಿ ಅವರು ಕೊಟ್ಟಿದ್ದ ಸಹಯೋಗ ಹಾಗೂ ಅದಕ್ಕೆ ಲಭಿಸಿದ್ದ ಪ್ರತೀಕಾರ ಇನ್ನೂ ಮಾಗಿರಲಿಲ್ಲ. ಎರಡನೆಯ ಬಾರಿಗೆ ಮೋಸ ಹೋಗಲು ಸಿದ್ಧರಿಲ್ಲದ ಬಾಪೂ ಸಹಕಾರ ಕೊಡಲು ತಿರಸ್ಕರಿಸಿದರು. ಸ್ವಾತಂತ್ರ್ಯವನ್ನು ಕೊಡುವ ಬಗ್ಗೆ ಸ್ಪಷ್ಟವಾಗಿ ಲಿಖಿತ ಜಾಮೀನು ಕೊಡಿ, ತದನಂತರವೇ ಯುದ್ಧದ ಬಗ್ಗೆ ಹಿಂದೂಸ್ತಾನದವರೊಂದಿಗೆ ಸಹಯೋಗವನ್ನು ಯಾಚಿಸಿ ಎಂದು ಬಾಪೂ ಹೇಳಿದ್ದರು.

ಸಹಯೋಗದ ದಿಕ್ಕಿನಲ್ಲಿ ಮುಂದುವರೆದು ರಚಿಸಲಾದ ಪ್ರಾಂತ್ಯದ ದೇಶಿ ಸರ್ಕಾರಗಳು ರಾಜೀನಾಮೆಯನ್ನು ಕೊಟ್ಟಿದ್ದವು. ದೇಶದ ಹನ್ನೊಂದು ಪ್ರಾಂತ್ಯಗಳಲ್ಲಿನ ಒಂಬತ್ತು ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಸರ್ಕಾರ ಆಡಳಿತವನ್ನು ನಡೆಸುತ್ತಿತ್ತು. ಈ ಸರ್ಕಾರಗಳು ಬ್ರಿಟಿಷ್ ಯುದ್ಧದ ಬಗ್ಗೆ ಅಸಹಯೋಗವನ್ನು ಪ್ರದರ್ಶಿಸುತ್ತಾ ರಾಜೀನಾಮೆಯನ್ನು ಕೊಟ್ಟಿದ್ದವು. ದಿಲ್ಲಿಯ ಅಧಿಕಾರಿಗಳಿಗೆ ಉತ್ತರದ ರೂಪದಲ್ಲಿ ಆಕ್ರಮಣವೆಸಗುವಂತೆ ಆದೇಶ ಲಭಿಸಿದೆ ಎಂಬಂತೆ ಅವರು ಬಂಧನ, ಜೈಲು, ಲಾಠೀಚಾರ್ಜ್, ಗೋಲಿಬಾರ್ ಎಲ್ಲವನ್ನೂ ಬಹಿರಂಗವಾಗಿ ಪ್ರಯೋಗಿಸಲು ಆರಂಭಿಸಿದ್ದರು. ಜವಾಹರಲಾಲ್ ನೆಹರೂ ಅವರ ಮೇಲೆ ಬಂಡಾಯದ ಆರೋಪವನ್ನು ಹೊರಿಸಿ ಅವರನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲಾಯಿತು. ನೆಹರೂ ಅವರು ಅಲ್ಲಿಂದ ತಮ್ಮನ್ನು ಪಾರು ಮಾಡಿಕೊಳ್ಳಲು ಸ್ಪಷ್ಟವಾಗಿ ತಿರಸ್ಕರಿಸಿದರು. ಅವರು ಆಗ ನಾಲ್ಕು ವರ್ಷಗಳ ಸಶ್ರಮ ಜೈಲುಶಿಕ್ಷೆಯನ್ನು ಅನುಭವಿಸುತ್ತಿದ್ದರು. ಈಗ್ಗೆ ಕೆಲವು ದಿನಗಳ ಹಿಂದೆ ಮದ್ರಾಸ್ ಪ್ರಾಂತ್ಯದ ಮುಖ್ಯಮಂತ್ರಿಯಾಗಿ ರಾಜ್ಯದ ಆಡಳಿತದ ಸೂತ್ರವನ್ನು ಹಿಡಿದ ಚಕ್ರವರ್ತಿ ರಾಜಗೋಪಾಲಾಚಾರಿಯವರು ಈಗ ಓರ್ವ